ಏರ್ಪಾಡುಮಾಡಿ ಕೇಂದ್ರ ಸರ್ಕಾರಕ್ಕೆ ಕೊಡತಕ್ಕದ್ದು ; ಇದರ ಬಗ್ಗೆ ಸರ್ಕಾರ ಏನೇನು ಮಾಡಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ.--ಈಗಾಗಲೇ ಭೂಮಿಯನ್ನು ವಶಪಡಿಸಿಕೊಂಡು ಅವರ ಸ್ವಾಧೀನಕ್ಕೆ ಕೊಟ್ಟಿದ್ದೇವೆ. ವಿದ್ಯುಚ್ಛಕ್ತಿ ಮತ್ತು ಅವಶ್ಯ ಇರತಕ್ಕ ನೀರು ಸರಬರಾಜು ಮಾಡುವುದಕ್ಕೆ ರಾಜ್ಯ ಸರ್ಕಾರ ಒಪ್ಪಿದೆ. ಇದಕ್ಕೆ ಕೇಂದ್ರ ಸರ್ಕಾರ ಯೋಜನೆಯನ್ನು ಮಂಜೂರ್ಮಾಡಿ ಹಣ ಒದಗಿಸ ಬೇಕಾಗುತ್ತದೆ. ಅವರು ಹಣ ಒದಗಿಸಿದಾಗ ರಾಜ್ಯ ಸರ್ಕಾರ ಖಿರ್ಚುಮಾಡಿ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟೀಸ್ ಮಾಡಿಕೊಡುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.--ತಾವು ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಹೇಳಿದಿರಿ. ಆದರೆ ಇಂದಿರಾ ಗಾಂಧಿಯವರು ಹೇಳಿರುವುದು ಇನ್‌ಫ್ರಾಸ್ಟ್ರಕ್ಚರ್ ಇಲ್ಲದೆ ಇರುವುದರಿಂದ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಆಗುವುದಿಲ್ಲವೆಂದು. ಎರಡನೆಯದಾಗಿ ಹಣಕಾಸಿನ ಕೊರತೆ ಸಹ ಇದೆ ಎಂದು ಹೇಳಿದ್ದಾರೆ. ಆದ್ದರಿಂದ, ಇನ್‌ಫ್ರಾಸ್ಟ್ರಕ್ಚರ್ ಇಲ್ಲವೆಂಬುದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿ ಹಣಕಾಸಿನ ಬಗ್ಗೆ ಪತ್ರ ಬರೆದಿದ್ದೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.--ಇನ್‌ಫ್ರಾಸ್ಟ್ರಕ್ಚರ್ ಒದಗಿಸಿಕೊಡುವುದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಭರವಸ ಕೊಟ್ಟಿದೆ. ಎಲ್ಲವ್ಯವಸ್ಥೆ ಮಾಡಲು ಸಿದ್ಧವಿರುವುದಾಗಿ ತಿಳಿಸಿದೆ. ಹಣಕಾಸಿನ ಬಗ್ಗೆ ಕೇಂದ್ರ ಸರ್ಕಾರದಿಂದ ಮೇಲಿಂದ ಮೇಲೆ ಹೇಳಿಕೆ ಬರುತ್ತಿದೆ. ಆದರೆ ವಿಜಯನಗರದ ಉಕ್ಕಿನ ಕಾರ್ಖಾನೆಯ ಜೊತೆಗೆ ಬೇರೆ ರಾಜ್ಯಗಳಲ್ಲಿ ಸೇಲಂ ಮತ್ತು ವಿಶಾಖಪಟ್ಟಣಗಳಲ್ಲಿನ ಕಾರ್ಖಾನೆಯ ಕೆಲಸವನ್ನು ಕೈಗೆತ್ತಿಕೊಂಡ ವಿಚಾರ ಗೊತ್ತು. ಈಗ ಅವೆರಡೂ ಕಾರ್ಖಾನೆಗಳು ಉತ್ಪಾದನೆಯನ್ನು ಪ್ರಾರಂಭ ಮಾಡತಕ್ಕ ಮಟ್ಟಕ್ಕೆ ಬಂದಿವೆ. ದುರ್ದೈವದಿಂದ ವಿಜಯನಗರ ಕಾರ್ಖಾನೆ ಹಿಂದೆ ಬಿದ್ದಿದೆ. ಇದಕ್ಕೆ ನಾವೆಲ್ಲ ಒತ್ತಾಯಮಾಡಿ ಕೇಂದ್ರ ಸರ್ಕಾರದ ಮನ ಒಲಿಸಬೇಕಾಗಿದೆ.

ಅಧ್ಯಕ್ಷರು.--ಇಲ್ಲಿಗೆ ಪ್ರಶ್ನೋತ್ತರ ವೇಳೆ ನುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :—

ಶ್ರೀ ಎ. ಲಕ್ಷ್ಮೀಸಾಗರ್.--ಲಿಖಿತ ಮೂಲಕ ಪ್ರಶ್ನೆಗಳಿಗೆ ಉತ್ತರಿಸಿರುವ ಉತ್ತರದ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು.--ಲಿಖಿತ ಉತ್ತರದ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ವಿಷಯ :—ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ವರ್ಕ್ ಚಾರ್ಜ್ಡ್ ನೌಕರರ ಬಗೆಗೆ

ಪ್ರ. 69 (31) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ):—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?:—

ಅ. ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿರುವ ವರ್ಕ್‌ಚಾರ್ಜ್ಡ್ ನೌಕರರುಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ;

ಆ. ಇವರುಗಳಿಗೆ ಕಾನೂನು ರೀತ್ಯಾ ಸಂಬಳ, ತುಟ್ಟಿ ಭತ್ಯ ಇತ್ಯಾದಿ ಸೌಲಭ್ಯಗಳು ದೊರೆಯುತ್ತಿದೆಯೇ ;

ಇ. ಹಾಗಿಲ್ಲದಿದ್ದಲ್ಲಿ, ಇಲಾಖೆಯಲ್ಲಿರುವ ನೌಕರರಂತೆ ಪರಿಗಣಿಸಿ ವೇತನ ಇತ್ಯಾದಿ ಸೌಲಭ್ಯಗಳನ್ನು ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) :--

ಅ. ಲೋಕೋಪಯೋಗಿ ಇಲಾಖೆಯಲ್ಲಿ ಈಗ ಹಾಲಿ ವರ್ಕ್‌ಚಾರ್ಜ್ಡ್ ನೌಕರರ ಸಂಖ್ಯೆ ಸುಮಾರು 2888 ಜನರಿರುತ್ತಾರೆ. ಇವರುಗಳು ಸುಮಾರು 5 ವರ್ಷದಿಂದ 10 ವರ್ಷದ ಒಳಗಡೆ ಸೇವೆ ಸಲ್ಲಿಸಿರುತ್ತಾರೆ.

ಆ. ಹೌದು.

ಇ. ಮೇಲ್ಕಂಡ 'ಅ' ಪ್ರಶ್ನೆಗೆ ಉತ್ತರಿಸಿರುವುದರಿಂದ ಇದು ಉದ್ಭವಿಸುವುದಿಲ್ಲ.

ವಿಷಯ :—ಭದ್ರಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತಗೊಳಿಸುವುದು :—

ಪ್ರ. 70 (4) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) :--ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :--

ಅ. ಭದ್ರಾ ಮೇಲ್ದಂಡೆಯ ಯೋಜನೆಯು ಕಾರ್ಯಗತವಾಗುತ್ತಿರುವುದು ಸರಕಾರದವರ ಗಮನದಲ್ಲಿದೆಯೇ ;

ಆ. ಈ ಯೋಜನೆಯಿಂದ ನೀರಾವರಿ ಸೌಲಭ್ಯ ದೊರಕುವ ತಾಲ್ಲೂಕುಗಳಾವುವು ಮತ್ತು ಅಲ್ಲಿನ ಪ್ರದೇಶದ ವಿಸ್ತೀರ್ಣವೆಷ್ಟು (ಎಕರೆಗಳಲ್ಲಿ) ;

ಇ. ಈ ಯೋಜನೆಯನ್ನು ಆದಷ್ಟು ಬೇಗ ಕಾರ್ಯಗತ ಮಾಡಲಾಗುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) :--

ಅ. ಇಲ್ಲ ; ಏಕೆಂದರೆ, ಈ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದೆ.

ಅ. ನೀರಾವರಿ ಸೌಲಭ್ಯ ಪಡೆಯುವ ತಾಲ್ಲೂಕುಗಳು ಹೀಗಿವೆ :

1. ಚಿಕ್ಕಮಗಳೂರು ಜಿಲ್ಲೆ
   (1) ಕಡೂರು
2. ಚಿತ್ರದುರ್ಗ ಜಿಲ್ಲೆ
   (1) ಹೊಸದುರ್ಗ
   (2) ಹಿರಿಯೂರು
   (3) ಚಳ್ಳಕೆರೆ
   (4) ಮೊಳಕಾಲ್ಮೂರು
3. ತುಮಕೂರು ಜಿಲ್ಲೆ
   (1) ಶಿರಾ
   (2) ಮಧುಗಿರಿ

ಈ ಯೋಜನೆಯಿಂದ ಒಟ್ಟು 2.50 ಲಕ್ಷ ಎಕರೆಗೆ ನೀರಾವರಿ ಒದಗಿಸಲು ಉದ್ದೇಶಿಸಲಾಗಿದೆ.

ಇ. ಅನ್ವೇಷಣೆ ಮುಗಿದನಂತರ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :- ಭದ್ರಾ ಮೇಲ್ದಂಡೆ ಯೋಜನೆ

ಪ್ರಶ್ನೆ 71(6) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).– ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಸಂಬಂಧಿಸಿದ ಭದ್ರ ಮೇಲ್ದಂಡೆ ಯೋಜನೆಯ ಸರ್ವೆ ಕೆಲಸ ಮತ್ತು ಅಂದಾಜು ತಯಾರಿಯನ್ನು ಸರ್ಕಾರವು ಪುನಃ ಪ್ರಾರಂಭಿಸುತ್ತದೆಯೇ;

ಆ. ಹಾಗಿದ್ದರೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) :—

ಅ. ಭದ್ರಾ ಮೇಲ್ದಂಡೆ ಯೋಜನೆಯ ಅನ್ವೇಷಣೆಯು ಪ್ರಗತಿಯಲ್ಲಿದೆ.

ಆ. ಮೇಲೆ ನೀಡಿದ ಉತ್ತರದಿಂದ, ಪ್ರಶ್ನೆ ಉದ್ಭವಿಸುವುದಿಲ್ಲ.

Sub :-- New Industrial Policy

Question No. 72 (40) Sri Govind P. Vadeyaraj (Kamalapur).--Will the Minister for Industries be pleased to state :--

a. What is the new industrial policy of the Government ;
b. The important and salient features of the policy ;
c. To what extent the new industrial policy of the Govt. has helped create new opportunities for the industrialists ;
d. The number of entrepreneurs attracted by the new policy ?

Sri S. R. Bommai (Minister for Industries) :--

a. Policy Resolution is appended.
b. These have been stated in the Policy.
c. The Policy was only announced on **10-7-1983.** The notification was issued on 15–7–1983. It is too early to assess the impact of the policy on the creation of industries within the State. However the new policy will have a favourable impact in the acceleration of the growth of the industry in the State.
d. As at 'c'.

GOVERNMENT OF KARNATAKA

Commerce and Industries Secretariat

Industrial Policy in Karnataka

Preamble :—

The Economic and Planning Council of which the Chief Minister is the Chairman desired to discuss the Industrial Policy to be followed in the State. This is because :

(a) The Plan objective of removal of poverty and unemployment is not reflected fully in the present industrial policy parti–